ವಯೊಬಲ್ ಇರುವುದಿಲ್ಲ. ಅದಕ್ಕೆ ಒಂದು ಮೀಟಿಂಗ್‌ನ್ನು ಕರೆದು ಪರಿಶೀಲನೆ ಮಾಡಿ ಈ ದು ಸ್ಟೆಪ್‌ನ್ನು ತೆಗೆದುಕೊಂಡಿದ್ದೇವೆ.

MR. SPEAKER : If I have understood the Members correctly.

ಎಲ್ಲವನ್ನು ಒಟ್ಟಾಗಿ ಮಾಡಿ ಎಂದು ಹೇಳುತ್ತಿಲ್ಲ, at least make a beginning ಕೆಲವನ್ನಾದರೂ ಮಾಡಿ, ಇಷ್ಟನ್ನು ಮಾಡಿದ್ದೇವೆ, ಇಷ್ಟು ಉಳಿದಿದೆ, ಅದನ್ನು ರಿಪೋರ್ಟ್ ತರಿಸಿಕೊಂಡು ಮಾಡುತ್ತೇವೆ ಎನ್ನತಕ್ಕದನ್ನು ಹೇಳಬೇಕಲ್ಲವೆ?

(ಗೊಂದಲ)

ಶ್ರೀ ಎಸ್.ಎಂ. ಯಾಹ್ಯಾ : ಲಂಬಾಣಿ ಕ್ರೈಟೀರಿಯಾ ಯಾವುದೆಂದು ರೆವಿನ್ಯೂ ಮಿನಿಸ್ಟರ್ ಹೇಳುತ್ತಿದ್ದಾರೆ. ಈ ಕ್ರೈಟೀರಿಯಾ ನೋಡಿದರೆ ಇನ್ನು ಒಂದೆರಡು ವರ್ಷಗಳಲ್ಲಿ ಆಗುವ ಹಾಗೆ ಕಾಣುತ್ತಿಲ್ಲ. ಅದನ್ನು ರೀಕನ್ಸಿಡರ್ ಮಾಡಿ, ಈ ಕ್ರೈಟೀರಿಯಾವನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕಾಗಿದೆ. ಈ ಐದು ಕಂಡೀಷನ್‌ಗಳನ್ನು ನೋಡುವಾಗ ಈ ಐದು ಕಂಡೀಷನ್‌ಗಳ ಪ್ರಕಾರ ಐದು ವರ್ಷಗಳಲ್ಲಿ ಆಗುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ತೋರುತ್ತಿದೆ. ಆದ್ದರಿಂದ ಈ ಕ್ರೈಟೀರಿಯಾವನ್ನು ರಿವೈಸ್ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಂತಹ ಒಂದೆರಡು ಕಂಡೀಷನ್ಸ್ ಆಗದೇ ಹೋದರೂ ಕೂಡ ರಿಲ್ಯಾಕ್ಸ್ ಮಾಡಿ ಆ ಸೌಲಭ್ಯಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ತಿದ್ದುಪಡಿ

446 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡಜ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಗೆ ಒಳಪಟ್ಟು ಮನೆ ಮಾಲೀಕರಿಗೆ ಹಾಲಿ ಇರುವ ವಿನಾಯ್ತಿಯ ಅವಧಿ?

ಆ) ಹೊಸ ಮನೆಗಳ ಮಾಲೀಕರು, ಕಟ್ಟಡಗಳನ್ನು ಕಟ್ಟುವ ವಸ್ತುಗಳ ಬೆಲೆಗಳು ಅಧಿಕವಾಗಿರುವುದರಿಂದ, ಬಾಡಿಗೆ ನಿಯಂತ್ರಣ ಕಾಯ್ದೆಯ ವಿನಾಯ್ತಿಯನ್ನು 12 ವರ್ಷಕ್ಕೆ ವಿಸ್ತರಿಸಬೇಕೆಂದು ಕೇಳುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಮಸೂದೆ ತರಲು, ಸರ್ಕಾರವು ಸಮಿತಿಯೊಂದನ್ನು ರಚಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಮನೆ ಕಟ್ಟಡ ಪೂರೈಸಿದ ನಂತರ 5 ವರ್ಷಗಳು ವಿನಾಯ್ತಿ ಇರುತ್ತದೆ.

ಆ) ಹೌದು.

ಇ) ಇಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದಲ್ಲಿ ಒಂದು ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್ ಎಂದು ಇದೆ. ಈ ರೆಂಟ್ ಕಂಟ್ರೋಲ್ ಆಕ್ಟ್ ಯಾರ ಉದ್ದೇಶಕ್ಕೆ ಆಗಿದೆಯೋ, ಜನಗಳ ಉದ್ದೇಶಕ್ಕಾಗಿಯೋ, ಇಲ್ಲ ಜನಗಳನ್ನು ಕಾಡಿಸುವುದಕ್ಕೆ ಪೀಡಿಸುವುದಕ್ಕೆ ಆಗಿದೆಯೋ ಗೊತ್ತಿಲ್ಲ. ನಮ್ಮ

ಬೆಂಗಳೂರು ನಗರದಲ್ಲಿ 4 ರೆಂಟ್ ಕಂಟ್ರೋಲರ್‌ಗಳು ಇದ್ದಾರೆಂದು ತಿಳಿದಿದ್ದೇನೆ. ಈ ಕಂಟ್ರೋಲರ್‌ಗಳು ಏನು ಮಾಡುತ್ತಿದ್ದಾರೆಂದರೆ ಯಾವುದೇ ಮನೆಗಳನ್ನಾದರೂ ನೋಟಿಫಿಕೇಷನ್ ಮಾಡಿ ಮನೆ ಮಾಲೀಕರು ಐದು ವರ್ಷವಾದ ಮೇಲೆ ಮನೆ ಕೊಡಬೇಕೆಂದು ತಿಳಿಸುವುದರಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಇದೆಲ್ಲಾ ನಮಗೆ ತಿಳಿದಿರುವ ವಿಚಾರ. ಈ 224 ಸದಸ್ಯರು ಕುಳಿತಿರುವ ಈ ಮನೆಯಲ್ಲಿ ಇದು ಎಲ್ಲರಿಗೂ ತಿವಿದಿರುವ ವಿಚಾರ. ಈ ತರಹ ತಿಳಿದಿರುವಾಗ, ಈ ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್‌ಗೆ ಏನಾದರೂ ಒಂದು ವ್ಯವಸ್ಥೆ ಮಾಡಿ, ಇದು ಒಳ್ಳೆಯ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕಾಗುತ್ತದೆ. ಈ ಭ್ರಷ್ಟಾಚಾರ ಪೀವನ್‌ನಿಂದ ಹಿಡಿದು ಕಂಟ್ರೋಲರ್‌ರವರವರೆಗೆ ಬಹಳಷ್ಟು ಜಾಸ್ತಿಯಾಗಿದೆ. ಇನ್ನೊಂದು ವಿಷಯ ಹೇಳಬೇಕೆಂದರೆ, 15 ವರ್ಷಗಳ ಕೆಳಗೆ ಶ್ರೀಮತಿ ಪ್ರಮೀಳ ಕಮಿಟಿ ಎಂದು ಒಂದು ಕಮಿಟಿ ಮಾಡಿದ್ದರು. ಆ ಕಮಿಟಿ ರಿಪೋರ್ಟ್ ಕೊಟ್ಟು 15 ವರ್ಷವಾಗಿದೆ. ಈ 15 ವರ್ಷಗಳಲ್ಲಿ ನಾನಾ ಸರ್ಕಾರಗಳು ಬಂದು ಯಾವುದೇ ಸರ್ಕಾರವು ಇದರ ಬಗ್ಗೆ ತೀವ್ರವಾಗಿ ಚಿಂತನೆ ಮಾಡುತ್ತಿಲ್ಲ. ಒಂದು ಕಡೆ ಮನೆಗಳ ಕಟ್ಟಡದ ನಿರ್ಮಾಣದ ವೆಚ್ಚ ಜಾಸ್ತಿಯಾಗುತ್ತಿದೆ. ಮನೆ ಮಾಲೀಕರು ಯಾರೂ ರೆಂಟ್ ಕಂಟ್ರೋಲ್‌ಗೆ ರೆಫರ್ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಹಾಗಿರುವಾಗ ಇದು ಒಂದು- ಭ್ರಷ್ಟಾಚಾರಕ್ಕೆ ಅನುಕೂಲವಾಗಿರುವ ಆಫೀಸ್ ಆಗಿದೆಯೇ ಹೊರತು ಇದು ಬೇರೆ ಯಾವ ಒಂದು ಜನಕ್ಕೂ ಸಹಾಯವಾಗುತ್ತಿಲ್ಲ. ಆದುದರಿಂದ ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಇದರ ಬಗ್ಗೆ ಏನಾದರೂ ಚಿಂತನೆ ಮಾಡಿ. ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಟ್ಟು ನಿರ್ಮಾಣ ವೆಚ್ಚ ಹೆಚ್ಚಾಗಿರುವುದರಿಂದ ಇದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಮೂರನೇ ಪ್ರಶ್ನೆಯಲ್ಲಿ ಬಾಡಿಗೆ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ಸೂಚಿಸಲು ಸಮಿತಿಯೊಂದನ್ನು ಸರ್ಕಾರದವವು ರಚಿಸುವರೇ ಎಂದು ಕೇಳಿದ್ದಕ್ಕೆ 'no' ಎಂದು ಉತ್ತರ ಕೊಟ್ಟಿದ್ದಾರೆ. The second answer is redundant to the first answer. Hon'ble Speaker Sir, what I request the Hon'ble Minister is, this is a serious problem confronting almost all the towns and big cities. Unless the government takes it seriously there is no point in appointing any committee because already Pramila Committee's report is there before the government. The Government must seriously take up this issue and do something about this Rent Control Act. Otherwise, it becomes a laughing stock among the public.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಅವರು ಕೇಳಿದಂತಹ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಅವರು ಈ 5 ವರ್ಷ ಅವಧಿ ಇದ್ದುದನ್ನು 12 ವರ್ಷ ಮಾಡುತ್ತೀರಾ ಎಂದು ಕೇಳಿದ್ದಾರೆ. ಈಗ ಬಿಲ್ಡಿಂಗ್‌ಗಳನ್ನು ಕಟ್ಟಿದರೆ ಈ ಐದು ವರ್ಷಗಳವರೆಗೆ ಈ ಕಂಟ್ರೋಲ್ ಪರಿದಿಗೆ ಬರುವುದಿಲ್ಲ. ಅದಕ್ಕೆ 12 ವರ್ಷ ಮಾಡುತ್ತೀರೋ ಹೇಗೆ? ಎಂದು ಕೇಳಿದ್ದಾರೆ, ಅದನ್ನು ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ, ಹೊಸದಾಗಿ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಎಂದು ಅವರೇ ಸಲಹೆ ಮಾಡಿದ್ದಾರೆ. existing rent control Actಗೆ ಏನಾದರೂ ಅಮೆಂಡ್‌ಮೆಂಟ್ ತರುತ್ತಾರೋ ಹೇಗೋ ಎಂದು ಕೇಳಿದ್ದಾರೆ. ಅದು ಪ್ರಮೀಳಾ ಕಮಿಟಿ ರಿಪೋರ್ಟ್

ಆಧಾರದ ಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಂದು ಬಿಲ್ ಕಳುಹಿಸಿದ್ದೆವು. ಆ ಒಂದು ಅಸೆಂಬ್ಲಿ ಅವಧಿ ಮುಗಿದ ನಂತರ ಆ ಪ್ರಮೀಳಾ ಕಮಿಟಿ ರಿಪೋರ್ಟ್ ಅಲ್ಲಿಗೇ ಲ್ಯಾಪ್ಸ್ ಆಗಿದೆ. ಆ ಬಿಲ್ಲನ್ನು ಈಗೆ ಹೊಸದಾಗಿ ಇಂಟ್ರಡ್ಯೂಸ್ ಮಾಡಬೇಕಾಗುತ್ತದೆ. ಅದೇ ಕಮಿಟಿಯದ್ದು ತರಬೇಕೆಂದರೂ ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ತೆಗೆದುಕೊಂಡು ಬರಬೇಕು. ಇಲ್ಲವೆಂದರೆ ಈಗ ಕೇಂದ್ರಸರ್ಕಾರದವರು 7ನೇ ತಾರೀಖು ಒಂದು ಮೀಟಿಂಗ್ ಇಟ್ಟಿದ್ದಾರೆ. ಕೇಂದ್ರಸರ್ಕಾರದವರು ರೆಂಟ್ ಕಂಟ್ರೋಲ್ ಆಕ್ಟ್ ತರಬೇಕೆಂದಿದ್ದು ಆ ಬಗ್ಗೆ ಒಂದು ಮಾಡಲ್ ಬೈಲಾವನ್ನು ಎಲ್ಲರಿಗೂ ಕೂಡ ಕಳುಹಿಸಿದ್ದಾರೆ.

11.45 ಪಿ.ಎಂ.

ಅದರ ಆಧಾರದ ಮೇಲೆ, ಪ್ರಮೀಳಾ ಕಮಿಟಿಯ ವರದಿಯ ಸಾರಾಂಶ ಏನಿದೆ ಆ ರೆಕಮೆಂಡೇಷನ್‌ನ್ನೂ ಕ್ರೋಢೀಕರಿಸಿ ಪುನಃ ಈ ಸದನದ ಮುಂದೆ ಹೊಸ ಬಿಲ್ಲನ್ನು ತಿದ್ದುಪಡಿಯೊಂದಿಗೆ ತಂದು ತಾವು ಏನು ನ್ಯೂನತೆಗಳನ್ನು ಕಂಡುಹಿಡಿದಿದ್ದೀರಿ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡೋಣ.

ಇನ್ನು ಎರಡನೆಯದಾಗಿ, ರೆಂಟ್ ಕಂಟ್ರೋಲ್ ಆಫೀಸಿನಲ್ಲಿ ಲಂಚ ಇದೆ ಎಂದು ಹೇಳಿದ್ದಾರೆ. ತಾವು ಸಿಟಿ ಶಾಸಕರಾಗಿದ್ದೀರಿ. ಇಂಥವರು, ಇಂಥ ಕಡೆ ಹೀಗೆ ಮಾಡಿದ್ದಾರೆಂದು ನನ್ನ ಗಮನಕ್ಕೆ ತಂದರೆ ನಿಜವಾಗಿಯೂ ಅವರ ವಿರುದ್ಧ ಕೂಡಲೇ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೇನೆ. Immediately I will keep those officers under suspension. If he proves the charges, I will also dismiss them.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ರೆಂಟ್ ಕಂಟ್ರೋಲ್ ಆಕ್ಟ್‌ನ ಸೆಕ್ಷನ್ 4 ರ ಪ್ರಕಾರ ಇಂಥ ಮನೆ ಖಾಲಿ ಇದೆ ಎಂದು ನೋಟಿಫೈ ಮಾಡುತ್ತಾರೆ. ಇದನ್ನು ಮನೆಯ ಮಾಲೀಕರಿಗೆ ತಿಳಿಸದಿದ್ದರೂ ಕೂಡ ಸುವ್ಹೋ ಮೋಟೋ ಇವರೇ ನೋಟಿಫೈ ಮಾಡುತ್ತಾರೆ. ತಾವು ಬೇಕಾದರೆ ರೆಕಾರ್ಡ್ಸ್‌ನ್ನು ತೆಗೆಸಿ ನೋಡಿ. ಅದರಲ್ಲಿ 100 ಮನೆ ಖಾಲಿ ಇವೆಯೆಂದು ನೋಟಿಫೈ ಮಾಡಿದರೆ ಅದರಲ್ಲಿ ಒಂದು ಮನೆಯನ್ನು ಮಾತ್ರ ಯಾರಿಗಾದರೂ ಸರ್ಕಾರಿ ನೌಕರರಿಗೆ ಅಲಾಟ್ ಮಾಡುತ್ತಾರೆ. ಇನ್ನು ಉಳಿದಂಥ ಮನೆಗಳನ್ನು ಹಾಗೇ ಬಿಟ್ಟುಬಿಡುತ್ತಾರೆ. ಇದನ್ನು ಯಾವರೀತಿ ಬಿಡುತ್ತಾರೆಂದು ನೋಡಿ. ನೂರು ಮನೆಗಳಲ್ಲಿ ಒಂದು ಮನೆಯನ್ನು ಅಲಾಟ್‌ಮೆಂಟ್ ಮಾಡುತ್ತಾರೆ. ಇದನ್ನು ತಾವು ವೆರಿಫೈ ಮಾಡಿದರೆ ಆಗ ಈ 4 ಜನ ರೆಂಟ್ ಕಂಟ್ರೋಲ್ ಆಫೀಸರ್‌ಗಳನ್ನೂ ಡಿಸ್‌ಮಿಸ್ ಮಾಡಬಹುದು.

ಅಧ್ಯಕ್ಷರು : ಬಸವರಾಜ ರಾಯರೆಡ್ಡಿಯವರೆ ನಿಮ್ಮ ಚು.ಪ್ರ.474ರಲ್ಲಿ ವೀರಪ್ಪನ್ ಬಗ್ಗೆ ಕೇಳಿದ್ದೀರಿ. ವೀರಪ್ಪನ್‌ನನ್ನು ದಸ್ತಗಿರಿ ಮಾಡುವ ವಿಚಾರದಲ್ಲಿ ನಿನ್ನೆ ಉತ್ತರವಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಏನು ಪ್ರಶ್ನೆಯನ್ನು ಕೇಳಿದ್ದೇನೆಂದರೆ...

ಅಧ್ಯಕ್ಷರು : ಯಾವಾಗ ಅವನನ್ನು ಹಿಡಿಯುತ್ತೀರೆಂದು ಕೇಳುತ್ತಿದ್ದೀರಾ?

ಶ್ರೀ ಬಸವರಾಜ ರಾಯರೆಡ್ಡಿ : ಅರಣ್ಯ ಇಲಾಖೆಯಿಂದ ಏನಾದರೂ ಇವರನ್ನು ಹಿಡಿಯುವುದಕ್ಕೆ ಪ್ರಯತ್ನಮಾಡಿದ್ದಾರೆಯೇ ಎಂದು ಕೇಳಿದ್ದೇನೆ. ಅರಣ್ಯ ಇಲಾಖೆಯವರು ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ ಮತ್ತು ನೀವು ಏನು ಕೋಆರ್ಡಿನೇಷನ್‌ನ್ನು ಕೊಟ್ಟಿದ್ದೀರೆಂದು ಕೇಳಿದ್ದೇನೆ.

ಅಧ್ಯಕ್ಷರು : ಇದಕ್ಕೆ ಸ್ಪೆಷಲ್ ಟಾಸ್ಕ್ ಫೋರ್ಸ್ ಎಂದು ಇದೆ. ಈ ಟಾಸ್ಕ್ ಫೋರ್ಸ್‌ನಲ್ಲಿ ಅರಣ್ಯ ಇಲಾಖೆಯವರು ಇರುತ್ತಾರೆ, ಪೋಲೀಸ್ ಇಲಾಖೆಯವರೂ ಇರುತ್ತಾರೆ, ಗುಪ್ತಚಾರ ದಳದವರೂ ಇರುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಇದಕ್ಕೆ ಎಷ್ಟು ಹಣವನ್ನು ಖರ್ಚುಮಾಡಲಾಗಿದೆ ಎಂದು ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿದ್ದೇನೆ. ಅದನ್ನಾದರೂ ಹೇಳಬೇಕಲ್ಲ.

ಅಧ್ಯಕ್ಷರು : ಇದನ್ನು ಗೃಹ ಇಲಾಖೆಗೆ ವರ್ಗಮಾಡಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಗೃಹ ಇಲಾಖೆಯ ಬಗ್ಗೆ ಕೇಳಿಲ್ಲ. ಅರಣ್ಯ ಇಲಾಖೆಯಿಂದ ಹಣವನ್ನು ಖರ್ಚುಮಾಡಿರತಕ್ಕ ಬಗ್ಗೆ ಕೇಳಿದ್ದೇನೆ. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಅರಣ್ಯ ಇಲಾಖೆಯವರು ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂದು ನಾನು ಕೇಳಿದ್ದೇನೆ. ಅರಣ್ಯ ಇಲಾಖೆಯವರು ಖರ್ಚು ಮಾಡಿದ್ದರೆ ಮಾಡಿದ್ದೇವೆಂದು ಹೇಳಲಿ. ಮಾಡಿಲ್ಲದಿದ್ದರೆ ಮಾಡಿಲ್ಲವೆಂದು ಹೇಳಲಿ.

ಶ್ರೀ ಇ.ಟಿ. ಶಂಬುನಾಥ್ : ಈ ವರ್ಷದಲ್ಲಿ ಅರಣ್ಯ ಇಲಾಖೆಯಿಂದ ಯಾವ ಖರ್ಚನ್ನೂ ಇದಕ್ಕಾಗಿ ಮಾಡಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೂಲತಃ ಈ ಪ್ರಶ್ನೆಯನ್ನು ನಾನು ಯಾವ ಇಲಾಖೆಯವರಿಗೆ ಕೇಳಬೇಕು? ಯಾವ ಇಲಾಖೆಯವರು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ?

ಅಧ್ಯಕ್ಷರು : ನಾನು ಯೋಚನೆ ಮಾಡಿ ನಿಮಗೆ ಹೇಳುತ್ತೇನೆ. ನೀವು ನನಗೆ ಸ್ವಲ್ಪ ಟೈಂ ಕೊಟ್ಟರೆ ನೀವು ಯಾವ ಇಲಾಖೆಯವರನ್ನು ಕೇಳಬೇಕೆಂದು ಹೇಳುತ್ತೇನೆ.

ಬೈಲಹೊಂಗಲ ತಾಲ್ಲೂಕು ಕೆಂಗಾನೂರು ಗ್ರಾಮದಲ್ಲಿ ಮೀನುಗಾರರಿಗೆ ವಸತಿ ನಿರ್ಮಾಣ.

97 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವ್ ಜಿಲ್ಲೆ ಸೌದತ್ತಿ ತಾಲ್ಲೂಕು ಮಾಟೊಳ್ಳಿ ಹಾಗೂ ಬೈಲಹೊಂಗಲ ತಾಲ್ಲೂಕು ಕೆಂಗಾನೂರು ಗ್ರಾಮದಲ್ಲಿ ಮೀನುಗಾರರ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಬೇಡಿಕೆ ಬಂದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಮೀನುಗಾರರ ಸಲುವಾಗಿ ಮನೆಗಳನ್ನು ಕಟ್ಟಿಸಿಕೊಡಲು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಈ ಮೀನುಗಾರರು ಮಲಪ್ರಭಾ ಮುಳುಗಡೆಯಾದ ಪ್ರದೇಶದವರಾಗಿದ್ದು, ಮುಳುಗಡೆ ಪ್ರದೇಶದ ಮೀನುಗಾರರ ಅನುಕೂಲತೆಗಾಗಿ ಮನೆಗಳನ್ನು ಕಟ್ಟಿಸಿಕೊಡಲು ಹಿಂದಿನ ಸರ್ಕಾರ ಆಶ್ವಾಸನೆ ನೀಡಿದ್ದರೂ ಕೂಡ ಇದುವರೆಗೂ ಏಕೆ ಕಾರ್ಯಗತಗೊಂಡಿರುವುದಿಲ್ಲ.

ಈ) ಆದ್ದರಿಂದ ಕೂಡಲೇ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು?

ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು) :